**ಓ ಎಸ್ ನಂಃ 76/2018**
**ಡಿ.ಡಬ್ಲ್ಯೂ -1**
**ದಿನಾಂಕಃ 26-06-2024**

**ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ ವಿ ಎ ವಕೀಲರಿಂದಃ**

ಎರಡರಿಂದ 6 ನೇ ಪ್ರತಿವಾದಿಗಳು ಈಶ್ವರ ಶೆಟ್ಟರ ಮಕ್ಕಳು ಎಂದರೆ ಸರಿ. ಈಶ್ವರ ಶೆಟ್ಟರು ನನಗೆ ಮಾವನಾಗಬೇಕುಎಂದರೆ ಸರಿ. ಎರಡರಿಂದ 6 ನೇ ಪ್ರತಿವಾದಿಗಳ ಮತ್ತು ನಮ್ಮ ನಡುವೆ ಯಾವ ದ್ವೇಷವಿರುವುದಿಲ್ಲ. ದಾವಾ 2 ನೇ ಸ್ವತ್ತು ನನ್ನ ತಾಯಿ ನನ್ನ ಹೆಸರಿಗೆ ದಾನ ಪತ್ರವನ್ನು ಮಾಡಿಕೊಟ್ಟಿದ್ದು ಅದು ಈಗ ನನ್ನ ಹೆಸರಿನಲ್ಲಿಯೇ ಇರುತ್ತದೆ. ದಾವಾ 1 ನೇ ಮತ್ತು 2 ನೇ ಸ್ವತ್ತು ಇದನ್ನು ನನ್ನ ಸಹೋದರಿಯರಿಗೆ ಯಾವುದೇ ಪಾಲನ್ನು ನಾನು ನೀಡಿರುವುದಿಲ್ಲ. ನನ್ನ ಸಹೋದರಿ ನಾಗವೇಣಿ ಈಗ ಜೀವಂತವಾಗಿ ಇರುವುದಿಲ್ಲ . ಸೀತಲಕ್ಷ್ಮಿ, ನಿರ್ಮಲಮ್ಮ ಮತ್ತು ಪುಷ್ಪಾವತಿ ಜೀವಂತವಾಗಿದ್ದಾರೆ. ನನ್ನ ಅಣ್ಣ ನಾಗರಾಜಶೆಟ್ಟರು ನಾನು ಜೊತೆಯಲ್ಲಿಯೇ ಇರುತ್ತೇವೆ.

2. ಸಾಕ್ಷಿಗೆ ಒಂದು ಪೊಟೋವನ್ನು ತೋರಿಸಲಾಗಿ ಸಾಕ್ಷಿಯು ಆ ಪೋಟೋದಲ್ಲಿ ಕುಳಿತುಕೊಂಡಿರುವಂತಹ ವ್ಯಕ್ತಿಯು ನಾಗರಾಜಶೆಟ್ಟರು ಎಂದು ಹೇಳಿರುತ್ತಾರೆ ಮತ್ತು ಅವರ ಪಕ್ಕದಲ್ಲಿರುವ ವ್ಯಕ್ತಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ಸದರಿ ಪೊಟೋವನ್ನು ನಿಪಿಃ 12 ಎಂದು ಗುರುತಿಸಲಾಯಿತು . ಸಾಕ್ಷಿಗೆ ಇನ್ನೊಂದು ಪೊಟೋ ತೋರಿಸಲಾಗಿ ನನ್ನ ಅಣ್ಣ ನಮ್ಮ ಅಕ್ಕಂದಿರು ಮತ್ತು ನನ್ನ ಹೆಂಡತಿ ಇರುತ್ತಾರೆ. ಸದರಿ ಪೊಟೋವನ್ನು ನಿಪಿಃ 13 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಪೊಟೋ ತೋರಿಸಲಾಗಿ ಸಾಕ್ಷಿಯು ನಾನು ಒಂದು ಮದುವೆಗೆ ಹೋಗಿದ್ದು, ಆ ಪೊಟೋದಲ್ಲಿರುವ ವ್ಯಕ್ತಿ ನಾನೇ ಆಗಿದ್ದು ಯಾವ ಮದುವೆಗೆ ಹೋಗಿದ್ದೆ ಎಂದು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಪೊಟೋವನ್ನು ನಿಪಿಃ 14 ಎಂದು ಗುರುತಿಸಲಾಯಿತು . ನನಗೆ ಮದುವೆಗೆ ಕರೆದಿರುತ್ತಾರೆ. ಅದ ಕಾರಣ ನಾನು ಮದುವೆಗೆ ಹೋಗಿರುತ್ತೇನೆ. ಮತ್ತು ಸದರಿ ಪೊಟೋದಲ್ಲಿರುವಂತಹ ಮದುವೆಯ ಹುಡುಗ ನನ್ನ ಅಣ್ಣನ ಮಗ ಹೌದೋ ಅಲ್ಲವೋ ಎಂದು ನನಗೆ ಗೊತ್ತಿಲ್ಲ.

ಓ ಎಸ್ ನಂಃ 76/2018
ಡಿ.ಡಬ್ಲ್ಯೂ -1
ದಿನಾಂಕಃ 26-06-2024

3. ಸದರಿ ಸಮಾರಂಭವು ನನ್ನ ಅಣ್ಣ ನಾಗರಾಜಶೆಟ್ಟಿಯವರ ಕುಟುಂಬದ ಸಮಾರಂಭ ಎಂದರೆ ನನಗೆ ನೆನಪಿಲ್ಲ. ವಾದಿ 1 ನಾಗರಾಜ ಶೆಟ್ಟಿಯವರ ಹೆಂಡತಿಯಾಗಿರುತ್ತಾರೆ. ವಾದಿ 2 ರಿಂದ 6 ರವರು ನಾಗರಾಜಶೆಟ್ಟಿಯವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ನಾಗರಾಜಶೆಟ್ಟಿಯವರಿಗೆ ಮದುವೆಯೇ ಆಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ 2 ರಿಂದ 6 ಇವರು ನನ್ನ ಅಣ್ಣನ ಮಕ್ಕಳಾಗಿದ್ದು, ನನ್ನ ಅಣ್ಣನ ಮಕ್ಕಳಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ 1 ಮತ್ತು 2 ನೇ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದು ಅದರಲ್ಲಿ ವಾದಿಯರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ ಮತ್ತು ನಾನು ಸುಳ್ಳು ದಾನ ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ದಾನ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ .

4. ನಾಗರಾಜ ಶೆಟ್ಟಿಯವರ ಕುಟುಂಬದ ಸಮಾರಂಭಗಳಿಗೆ ನಾವು ಭಾಗಿಯಾಗುತಿದ್ದು ಅವರ ಕುಟುಂಬದ ವಿಚಾರ ತಿಳಿದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ವಿಚಾರವಾಗಿ ನಾನು ವಾದಿಗಳೊಂದಿಗೆ ಉತ್ತಮ ಸಂಬಂಧವಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.